# ಪ್ರಥಮ ಪಿ.ಯು.ಸಿ. ವಾರ್ಷಿಕ ಪರೀಕ್ಷೆ, ಜನವರಿ–ಫೆಬ್ರವರಿ, 2019

ಸಮಯ: 3 ಗಂಟೆ 15 ನಿಮಿಷ ವಿಷಯ: ಕನ್ನಡ (01) ಅಂಕಗಳು: 100

ಅ – ವಿಭಾಗ

I. ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. 10X1=10

1. ಚೆನ್ನಯ್ಯ ಮಾಡುತ್ತಿದ್ದ ಕಾಯಕ ಯಾವುದು?
2. ಮೃಗ ಪಕ್ಷಿಗಳು ಎಲ್ಲಿ ಆಡುತ್ತಿದ್ದವು?
3. ಅಖಂಡ ಕರ್ನಾಟಕದ ಚಕ್ರವರ್ತಿ ಯಾರು?
4. ಸಮಾಧಿಗಳು ಯಾರನ್ನು ಬಚ್ಚಿಟ್ಟುಕೊಂಡಿವೆ?
5. ನೀರಿಗಾಗಿ ಕರಿಯ ಏನನ್ನು ತರುತ್ತಿದ್ದ?
6. ಬಡವರ ವಕೀಲರೆಂದು ಪ್ರಸಿದ್ಧರಾದವರು ಯಾರು?
7. ಹುಲಿ ಕನ್ನಡಿಯಲ್ಲಿ ಕಂಡಿದ್ದೇನು?
8. ಪಿಶಾಚಿಗಳು ಮನುಷ್ಯರನ್ನು ಯಾವುದರ ಮೂಲಕ ಪ್ರವೇಶಿಸುತ್ತವೆ?
9. ಬೋಳೇ ಶಂಕರನ ಹೊಟ್ಟೆ ನೋವು ಯಾವುದರಿಂದ ಮಾಯವಾಯಿತು?
10. ರಾಜಕುಮಾರಿಗೆ ಬಂದ ರೋಗ ಯಾವುದು?

ಆ – ವಿಭಾಗ

II. ಅ. ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 2X4=8

11. ಮಾದೇವನ ಶಿಶು ಮಕ್ಕಳ ಹೆಸರೇನು?
12. ನಾಡಿನ ಹೊರಗಿನ ಮತ್ತು ಒಳಗಿನ ಕಳ್ಳರು ಯಾರು?
13. ಭ್ರೂಣಾವಸ್ಥೆಯ ಮಗು ಏಕೆ ಗಾಬರಿಗೊಂಡಿದೆ?
14. ಭೂಮಿ ಕಂಪಿಸಿದಾಗ ಏನಾಯಿತು?
15. ಕತ್ತರಿ ಮತ್ತು ಸೂಜಿಗಳ ಕೆಲಸ ಯಾವುದು?

ಆ. ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 3X2=6

16. ರಾಹುಕಾಲ, ಗುಳಿಕ ಕಾಲ, ಯಮಗಂಡಕಾಲಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?
17. ಮಾಸ್ತರರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದ್ದರು?
18. ಡಿ.ಸಿ.ಎಂ. ಸಂಸ್ಥೆಗೆ ಯಾರು ಯಾರು ಭೇಟಿ ನೀಡಿದ್ದರು?
19. ರೈತರ ಚಳುವಳಿ ಎಲ್ಲೆಲ್ಲಿ ನಡೆದಿದ್ದವು?

ಇ. ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ. 3X2=6

20. ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರನ ಅಣ್ಣ–ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?
21. ರಾಜಕುಮಾರಿಯ ಹೊಟ್ಟೆ ನೋವು ವಾಸಿ ಮಾಡಿದವರಿಗೆ ಏನು ಬಹುಮಾನ ಕೊಡುವುದಾಗಿ ಡಂಗುರ ಸಾರಿಸುತ್ತಾರೆ?
22. ಬೋಳೇಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟಿದ್ದಕ್ಕೆ ಸಾವ್ಕಾರಣ್ಣನು ಏನು ಹೇಳುತ್ತಾನೆ?
23 ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?

ಇ – ವಿಭಾಗ

III. ಅ. ಎರಡನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. 2X3=6

24. ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು.
25. ಮರೆಯಲಾತ್ಮ ಸಂಸ್ಕೃತಿ.
26. ಜೈವಿಕ ಇಂಧನ ಜೀವಕೆ ಇಂಧನ.

ಆ. ಒಂದನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. 1X3=3

27. ಇಲ್ಲೇ ಒಸಿದಿನ ಇಟ್ಕೊಂಡು ಉಳಿಸಿಕೊಡಿ.
28. ನಾನು ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದಿರುವೆ.

ಇ. ಒಂದನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1X3=3

29. ಕೊಳೆತ ಬಲೆ ಹಾಕಿ ಎಳೆದರೂ ಬರುವಂಥವರು.
30. ರಾಜಕುಮಾರಿಗೆ ಬಂದಿರೋದು ರಾಜರೋಗ.

## ಈ – ವಿಭಾಗ

**IV. ಅ. ಮೂರು ಪ್ರಶ್ನೆಗಳಿಗೆ ಐದು–ಆರು ವಾಕ್ಯದಲ್ಲಿ ಉತ್ತರಿಸಿ** **3X4=12**

31. ದುರ್ಯೋಧನ ರಣರಂಗದಲ್ಲಿ ನಡೆದು ಬಂದ ಬಗೆಯನ್ನು ಕವಿ ಹೇಗೆ ವರ್ಣಿಸಿದ್ದಾನೆ?
32. ವಾಲ್ಮೀಕಿ ಸೀತೆಯನ್ನು ಹೇಗೆ ಸಂತೈಸುತ್ತಾನೆ?
33. ಮಗು ಹಣ್ಣುಗಳಿಂದ ಕಲಿಯಬೇಕಾದ ಗುಣಗಳು ಯಾವುವು? ವಿವರಿಸಿರಿ.
34. 'ಮತ್ತೆ ಸೂರ್ಯ ಬರುತ್ತಾನೆ' ಕವಿತೆಯ ಆಶಯವನ್ನು ಚರ್ಚಿಸಿ.

**ಆ. ಎರಡು ಪ್ರಶ್ನೆಗಳಿಗೆ ಐದು–ಆರು ವಾಕ್ಯದಲ್ಲಿ ಉತ್ತರಿಸಿ.** **2X4=8**

35. ಹಳ್ಳಿಯ ಜನ ಕೈಯ್ಯಲ್ಲೇ ಮುದ್ದೆ ತಿನ್ನುವ ಚಿತ್ರಣವನ್ನು ವಿವರಿಸಿ.
36. ಮಾಯಾದೇವಿ ದೇವಾಲಯದ ಪರಿಸರ ಹೇಗಿತ್ತು?
37. ಪಲಾಯನ ಮಾಡುತ್ತಿದ್ದ ಹುಲಿಯನ್ನು ನರಿ ಹೇಗೆ ಸಮಾಧಾನ ಪಡಿಸಿ ಹಿಂದಕ್ಕೆ ಕರೆತಂದಿತು?

**ಇ. ಎರಡು ಪ್ರಶ್ನೆಗಳಿಗೆ ಐದು–ಆರು ವಾಕ್ಯದಲ್ಲಿ ಉತ್ತರಿಸಿ.** **2X4=8**

38. ಬೋಳೇಶಂಕರನ ನಾಣ್ಯ ಹಾಗೂ ಸೈನಿಕರನ್ನು ಪಡೆದ ಪ್ರಸಂಗವನ್ನು ವಿವರಿಸಿ.
39. ಸೈತಾನ ತನ್ನ ಪರಿಚಯ ಮಾಡಿಕೊಂಡ ಬಗೆ ಹಾಗೂ ಬಂದಂಥ ಕಾರಣವನ್ನು ತಿಳಿಸಿ.
40. ಯುದ್ಧ ಮಾಡಲು ಸೈನಿಕರು ಏಕೆ ನಿರಾಕರಿಸುತ್ತಾರೆ?

## ಉ – ವಿಭಾಗ

**V. ಅ. ಒಂದು ಪದ್ಯದ ಭಾವಾರ್ಥ ಬರೆಯಿರಿ.** **1X5=5**

41. ಜನಕಂಗೆ ಜಲಾಂಜಲಿಯಂ
ತನೂಭವಂ ಕುಡುವುದುಚಿತಮದುಗೆಟ್ಟೀಗಳ್
ನಿನಗಾಂ ಕುಡುವಂತಾದುದೆ
ತನೂಜ ನೀಂ ಕ್ರಮವಿಪರ್ಯಯಂ ಮಾಡುವುದೇ?

42. ಇಳಿದು ರಥದಿಂದ ಮಂದಾಕಿನಿಗೆ ಪೊಡಮಟ್ಟು
ಬಳಿಕ ನಾವಿಕರೊಡನೆ ನಾವದೊಳ್ಗಂಗೆಯಂ
ಕಳೆದು ನಿರ್ಮಲ ತೀರ್ಥದೊಳ್ಮಿಂದು ಸೌಮಿತ್ರಿ ಮತ್ತೆಭೂಜಾತೆ ಸಹಿತ
ಒಳಗೊಳಗೆ ಮರುಗಿ ಬಿಸುಸುಯ್ದು ಚಿಂತಿಸುವ ಮುಂ
ದಳೆದುಗ್ರ ಮೃಗ ಪಕ್ಷಿಗಣದಿಂದ ಘೂರ್ಮಿಸುವ
ಹುಳುವಮಂ ಪೊಕ್ಕನಡಿಯಿಡು ಪೊಡಸದಳಮೆಂಬ ಕರ್ಕಶದ ಮಾರ್ಗದಿಂದ

**ಆ. ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **6X2=12**

43. ಈ ಪದಗಳಿಗೆ ಅರ್ಥ ಬರೆಯಿರಿ.
1. ಪಿನಾಕಪಾಣಿ 2. ಕೈದು

44. ಈ ಪದಗಳಿಗೆ ನಾನಾರ್ಥ ಬರೆಯಿರಿ.
1. ಅರಣ್ಯ 2. ದೊರೆ

45. ಈ ಪದಗಳನ್ನು ಬಿಡಿಸಿ ಬರೆಯಿರಿ.
1. ಕಣ್ಮಲರ್ 2. ಕಣ್ಣರಳಿಸು

46. ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.
1. ಕತ್ತಲು 2. ಕ್ರಾಂತಿ

47. ಈ ಪದಗಳಿಗೆ ತದ್ಭವ ರೂಪ ಬರೆಯಿರಿ.
1. ಶಿರ 2. ಜನ್ಮ

48. ಈ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ.
1. ಈಸ್ಕೂಲ 2. ಚಣಹೊತ್ತು

49. ಎರಡು ಅನ್ಯ ದೇಶ್ಯ ಪದ ಬರೆಯಿರಿ.

**ಇ. ಒಂದನ್ನು ಕುರಿತು ಪ್ರಬಂಧ ಬರೆಯಿರಿ.** **1X5=5**

50. ಕೃಷಿ ಪದ್ಧತಿ 51. ಮೂಢನಂಬಿಕೆ

**ಈ. ಒಂದನ್ನು ಕುರಿತು ಪತ್ರ ಬರೆಯಿರಿ.** **1X4=4**

52. ನಿಮ್ಮ ಪ್ರವಾಸದ ಅನುಭವ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.
53. ಒಂದು ವಾರದ ರಜೆ ಕೋರಿ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ.

**ಉ. ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ.** **1X4=4**

54. ತಾಳಿದವನು ಬಾಳಿಯಾನು. 55. ಮಾಡಿದ್ದುಣ್ಣೋ ಮಹಾರಾಯ.

* * *